ಶ್ರೀ ಬಿ. ಸಿ. ನಂಜುಂಡಯ್ಯ.—ಇಷ್ಟರತನಕ ಎಷ್ಟು ಹಣ ಖರ್ಚಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಯವರೆಗೆ 1,23,000 ರೂಪಾಯಿಗಳು ಖರ್ಚಾಗಿವೆ ಎಂದು ನನ್ನ ಹತ್ತಿರ ಇರುವ information ನಿಂದ ಗೊತ್ತಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆಲಸ ನಿಲ್ಲಿಸಿ ಎಷ್ಟು ದಿವಸಗಳಾದವು?

Sri Kadidal MANJAPPA.—I want notice.

ಶ್ರೀ ಬಿ. ಸಿ. ನಂಜುಂಡಯ್ಯ.—ರಿವೈಸ್‌ಡ್ ಎಸ್ಟಿಮೇಟ್ಸ್ ಎಲ್ಲಿ scrutinise ಆಗುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—Superintending Engineer ಆಫೀಸಿನಲ್ಲಿ.

ಶ್ರೀ ಬಿ. ಸಿ. ನಂಜುಂಡಯ್ಯ.—ರಿವೈಸ್‌ಡ್ ಎಸ್ಟಿಮೇಟ್ ಎಷ್ಟಕ್ಕೆ ತಯಾರು ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—1,47,800 ರೂಪಾಯಿಗಳಿಗೆ.

ಶ್ರೀ ಬಿ. ಸಿ ನಂಜುಂಡಯ್ಯ.—ಒಂದು ಲಕ್ಷ 16 ಸಾವಿರ ರೂಪಾಯಿಗಳಲ್ಲದೆ, ಇನ್ನೂ 1,47,805 ರೂಪಾಯಿಗಳು ಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಎಲ್ಲಾ ಒಟ್ಟು ಎಸ್ಟಿಮೇಟ್ ಅಪ್ರಾವಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಇನ್ನು 30,000 ರೂಪಾಯಿಗಳು ಜಾಸ್ತಿಆಗುತ್ತವೆ. ಈ ಕೆಲಸ ಯಾವಾಗ ಮುಗಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಜಾಗ್ರತೆ ಮುಗಿಸಬೇಕೆಂದು ಸೂಚನೆ ಕೊಡಲಾಗಿದೆ.

Highway from Davanagere to Arsikere

Q.—434. Sm. Bellary SIDDAMMA (Davanagere).—

Will the Government be pleased to state :—

(*a*) whether they intend to form a highway from Davanagere to Arsikere *via* Maganahalli and Hiremegalgere :

(*b*) whether it has come to their notice that this will facilitate trade and will be of convenience to the public ;

(*c*) if so, the action taken ?

A.—Sri Kadidal MANJAPPA (Minister for Revenue and Public Works).—

(*a*) No.

(*b*) No.

(*c*) Does not arise.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ಈ ರಸ್ತೆಯಲ್ಲಿ ಅನೇಕ ಬಸ್ಸುಗಳು, ಗಾಡಿಗಳು ಮತ್ತು ಲಾರಿಗಳು ಮುಂತಾದುವು ಓಡಾಡಿ ವ್ಯಾಪಾರ ಸ್ಥಳಗಳನ್ನು ನಿಂದಿಸುತ್ತವೆ ಎಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆ ರಸ್ತೆಯಲ್ಲಿ ಯಾವಾಗಲೂ ಹೋಗಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ಈ ವರ್ಷ ಈ ರಸ್ತೆಯನ್ನು ಮಾಡಿಸಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ನಿರ್ಧರವಾಗಿ ತಮಗೆ ಜವಾಬು ಕೊಡಲು ಸಿದ್ಧನಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇನೆ.

Road from Bangalore to Chintamani (tarring).

Q.—580. Sri M. C. ANJANEYA REDDY (Chintamani).—

Will the Government be pleased to state :—

whether they have thought of tarring the road which runs from Bangalore to Chintamani ?

A.—Sri Kadidal MANJAPPA (Minister for Revenue and Public Works).—

Some portions have already been tarred, and proposals for tarring some more portions are received.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಪ್ರಶ್ನೆಯ ಉತ್ತರದಲ್ಲಿ ರಸ್ತೆಯ ಕೆಲವು ಭಾಗಗಳಿಗೆ ಈಗಾಗಲೇ ತಾರು ಹಾಕಲಾಗಿದೆ ಎಂದು ಹೇಳಿದ್ದೀರಿ. ಹೊಸ ಕೋಟೆಯಿಂದ ಚಿಂತಾಮಣಿಗೆ 30 ಮೈಲಿ ದೂರವಿದೆ. ಇದರಲ್ಲಿ ಎಷ್ಟು ಭಾಗಕ್ಕೆ ತಾರು ಹಾಕಿ ಮುಗಿಸಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟು ಮೈಲಿ ಆಗಿದೆ ಇಷ್ಟು ಮೈಲಿ ಆಗಿಲ್ಲವೆಂಬ ವಿವರಗಳನ್ನು ಕೊಡುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಎರಡು ವರ್ಷಗಳಿಂದಲೂ 22 furlongs ಹಾಕಿದ್ದೀರಿ. ವರ್ಷಕ್ಕೆ ಎಷ್ಟು furlongs ತಾರು ಹಾಕುವುದಕ್ಕೆ ನಿಮ್ಮ ಡಿಪಾರ್ಟ್‌ಮೆಂಟಿನಿಂದ ಸಾಧ್ಯವಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ದುಡ್ಡು ಇದ್ದರೆ ಎಲ್ಲಾ furlongs ಗಳಿಗೂ ಒಂದೇ ಸಾರಿ ತಾರ್ ಹಾಕಿಸುವುದಕ್ಕೆ ಅಥವಾ ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಸದಸ್ಯರು 20 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಎಲ್ಲಾ ರಸ್ತೆಗಳನ್ನೂ ಸಿಮೆಂಟ್ ಕಾಂಕ್ರೀಟ್ ಮಾಡಿಸುತ್ತೇವೆ.

Bhadra River at Anveri (Construction of Steps.)

Q.—82. Sri B. MADHAVACHAR (Bhadravati).—

Will the Government be pleased to state :—

(*a*) the population of Anveri Village, Bhadravati Taluk :

(*b*) the number of wells used for drinking water in the village :

(SRI B. MADHAVACHAR).—

(*c*) whether it is a fact that construction of steps to Bhadra River at Anveri was commenced a few years ago and left without completion?

A.—Sri T. CHANNIAH (Minister for Public Health and Local Self-Government).—

(*a*) 859.

(*b*) 2.

(*c*) No.

ಶ್ರೀ ಬಿ. ಮಾಧವಾಚಾರ್.—ಆನವೇರಿ ಗ್ರಾಮದ ಜನರು ತುಂಗಭದ್ರಾ ನದಿಯ ನೀರನ್ನು ನೆಚ್ಚಿಕೊಂಡಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಬಿ. ಮಾಧವಾಚಾರ್.—850 ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ಎರಡು—ಭಾವಿಗಳು ಇವೆ ಎಂದರೆ, ಈ ಗ್ರಾಮದ ಜನರು ನದಿ ನೀರನ್ನು ಉಪಯೋಗಿಸುತ್ತಿದ್ದಾರೆ ಎಂಬುದು ಅರ್ಥವಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ, ಎರಡು ಬಾವಿಗಳು ಅಲ್ಲಿರುವ ಜನಸಂಖ್ಯೆಗೆ ಸಾಕು, ಬೇರೆ ಬಾವಿಗಳನ್ನು ತೋಡಿಸುವ ಅವಶ್ಯಕತೆ ಇಲ್ಲ ಎಂದು ಡೆಪ್ಯುಟಿ ಕಮಿಷನರಿಗೆ ಕಂಡುಬಂದಿರಬಹುದು. ಮತ್ತು ಸರ್ಕಾರಕ್ಕೆ ಯಾವರೀತಿಯಾದ ವರದಿಯೂ ಬಂದಿಲ್ಲ. ಒಂದು ವೇಳೆ ಆ ಗ್ರಾಮಕ್ಕೆ ಮತ್ತೊಂದು ಬಾವಿಯ ಅವಶ್ಯಕತೆ ಇದೆ ಎಂದು ಡೆಪ್ಯುಟಿ ಕಮಿಷನರಿಗೆ ಕಂಡು ಬಂದರೆ - ಬಾವಿ ತೆಗೆಸಲು -ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಾರೆ

ಶ್ರೀ ಬಿ. ಮಾಧವಾಚಾರ್.—ಈ ಗ್ರಾಮದ ಜನರಿಗೆ ಕುಡಿಯುವ ನೀರಿನ ಬಾವಿಯನ್ನು ನದಿಯ ಪಕ್ಕದಲ್ಲಿ ತೋಡಿಸಿ ಕೊಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆ ಇದ್ದರೆ, ಡೆಪ್ಯುಟಿ ಕಮಿಷನರಿಂದ ಪ್ರಪೋಸಲ್ ಬಂದರೆ, ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ನದಿಯ ಪಕ್ಕದಲ್ಲಿ ಬಾವಿ ತೋಡಿಸಿದರೆ, ಸಿಹಿ ನೀರು ಬರುವುದಿಲ್ಲ, ಉಪ್ಪು ನೀರು ಬರುತ್ತದೆ ಎಂಬುದು ಸರ್ಕಾರದ ಗಮನದಲ್ಲಿ ಇದೆಯೇ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಕಡೆ ಆರೀತಿ ಆಗುವುದಿಲ್ಲ. ಕೆಲವು ಕಡೆ ಹಾಗೆ ಉಪ್ಪು ನೀರು ಬರಬಹುದು,

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ನದಿಯ ದಡದಲ್ಲಿ ನೀರು ಉಪ್ಪಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತೇ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರೀಕ್ಷೆ ಮಾಡುವ ಅವಶ್ಯಕತೆ ಕಂಡುಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ನದಿಯ ದಡದಲ್ಲಿ ಇರುವ ಜನರಿಗೆ ಮೆಟ್ಟಲನ್ನು ಕಟ್ಟಿಸಿಕೊಟ್ಟು ಅಲ್ಲಿಯ ಜನರು ನೀರನ್ನು ಉಪಯೋಗಿಸಲು ಅನುಕೂಲ ಮಾಡಿಕೊಡುವುದು ಸರಿಯಲ್ಲವೇ?

ಶ್ರೀ ಟಿ. ಚನ್ನಯ್ಯ.—ಅಲ್ಲ ಆ ರೀತಿ ಅವಶ್ಯಕತೆ ಇದೆಯೆಂದು ಸರ್ಕಾರದ ಗಮನಕ್ಕೆ ಬಂದ ಪಕ್ಷದಲ್ಲಿ ಅದಕ್ಕೆ ತಕ್ಕ ಏರ್ಪಾಡನ್ನು ಮಾಡಲಾಗುತ್ತದೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—4-6 ವರ್ಷಗಳಿಂದ ಮೆಟ್ಟಲನ್ನು ಕಟ್ಟಿಸಿಕೊಡಿ ಎಂದು ಡೆಪ್ಯುಟಿ ಕಮಿಷನರ ಮುಖಾಂತರ ಒತ್ತಾಯ ಪಡಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಅಧ್ಯಕ್ಷರು.—ಬಾವಿಯ ಬದಲಾಗಿ ಮೆಟ್ಟಲುಗಳನ್ನು ಕಟ್ಟಿಸಿಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಟಿ. ಚನ್ನಯ್ಯ.—ಮೆಟ್ಟಲುಗಳನ್ನು ಕಟ್ಟುತಕ್ಕ ಅವಶ್ಯಕತೆ ಇದೆ ಎಂದು ಸರ್ಕಾರದ ಗಮನಕ್ಕೆ ಒಂದು ಪ್ರಪೋಸಲ್ ತಂದರೆ ಅದನ್ನು ಪರ್ಯಾಲೋಚನೆ ಮಾಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾವಿರ ಪ್ರಜೆಗಳಿರತಕ್ಕ ಊರುಗಳಲ್ಲಿ ಅನೇಕ ಕಡೆ ಬಾವಿಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಾವಿಗಳಿಗೋಸ್ಕರ ನಿರ್ದಿಷ್ಟವಾಗಿ ತೆಗೆದಿಟ್ಟಿರತಕ್ಕಂಥ ಹಣವನ್ನು ನದಿಗೆ ಮೆಟ್ಟಲುಗಳನ್ನು ಕಟ್ಟಿಸುವುದರ ಕ್ಕೋಸ್ಕರ ಕೊಡಕೂಡದು ಎಂದು ಹೇಳುತ್ತೇನೆ. ಅನೇಕ ಗ್ರಾಮಗಳಲ್ಲಿ ಬಾವಿಗಳು ಇಲ್ಲದೇ-ಇರುವುದರಿಂದ ಈ ಹಣವನ್ನು ಬಾವಿ ತೋಡಿಸುವುದಕ್ಕೇ ಉಪಯೋಗಿಸಬೇಕಲ್ಲದೆ ಬೇರೆ ರೀತಿ ಉಪಯೋಗಿಸಬಾರದೆಂದು ಹೇಳುತ್ತೇನೆ.

Mr. SPEAKER.—Then you may ask the question whether it is permissible to utilise that amount for other purposes or not.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಡಿಯುವ ನೀರಿಗೋಸ್ಕರ ಏನಾಗಿಟ್ಟಿರುವ ನೆರವನ್ನು ಹೊಸದಾಗಿ ನದಿಗೆ ಮೆಟ್ಟಲುಗಳನ್ನು ಕಟ್ಟಿಸಿಕೊಡುವುದಕ್ಕೆ ಉಪಯೋಗಿಸುವುದು ಸೂಕ್ತವೇ?

Mr. SPEAKER.—It is a matter of opinion.

Drinking water wells in Bangalore North Taluk.

Q.—174. Sri A. V. NARASIMHA REDDY (Bangalore South).—

Will the Government be pleased to state:—

(*a*) the number and names of villages wherein drinking warter wells are yet to be provided in Bangalore South Taluk;

(*b*) the number of wells and names of villages where such wells are sanctioned;

(*c*) the number of wells completed up to December 1954?

A.—Sri T. CHANNIAH (Minister for Public Health and Local Self-Government).—

(*a*) Please see Statement 'A' appended.

(*b*) Please see Statement 'B' appended.

(*c*) 5 wells.